ದಿನಾಂಕ 08-03-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ. ಜಿ.ಎಸ್.ಆರ್.ಕೆ. ರೆಡ್ಡಿ ವಕೀಲರಿಂದ

ನಾನು ಕೆಂಗಲ್ ಗ್ರಾಮದ ಸರ್ವೆ ನಂ. 86 ಹಿಸ್ಸೆ ನಂ. 1 ಮತ್ತು 2 ಇವುಗಳ ಅಳತೆಗಾಗಿ ಹೋಗಿದ್ದೆ. ರಮಣರೆಡ್ಡಿಯವರು ಅರ್ಜಿಯನ್ನು ಕೊಟ್ಟಿದ್ದರು. ಹದ್ದುಬಸ್ತುಗಾಗಿ ಅರ್ಜಿ ನೀಡಿದ್ದರು. ಎಷ್ಟು ಸರ್ವೆ ನಂಬರ್‌ಗಳನ್ನು ಅಳತೆ ಮಾಡಿದ್ದೀರಿ ಎಂದರೆ ದಕ್ಷಿಣ ದಿಕ್ಕಿನಲ್ಲಿ ಕೊನೆಗಿರುವ ಜಮೀನಿನ ಬೌಂಡರಿಯಿಂದ ಸರ್ವೆ ನಂ. 86 ಒಟ್ಟು ಜಮೀನನ್ನು ಅಳತೆ ಮಾಡಿ ಗಡಿ ಗುರುತಿಸಿ ಹಿಸ್ಸೆಗಳನ್ನು ಅಳತೆ ಮಾಡಿದ್ದೇನೆ. ಅರ್ಜಿಯನ್ನು ಸರ್ವೆ ನಂ. 86/1 ಮತ್ತು 2 ರ ಮಾಲೀಕರು ಕೊಟ್ಟಿದ್ದರು.

ಎಲ್ಲಾ ಹಿಸ್ಸೆಗಳನ್ನು ಅಳತೆ ಮಾಡಿ ಹಿಸ್ಸಾ 1 ಮತ್ತು 2 ರ ಹದ್ದುಬಸ್ತುನ್ನು ಕಂಡುಹಿಡಿದಿರುತ್ತೇನೆ. ಪೊಡಿಯಾದ ನಂತರ ಹದ್ದುಬಸ್ತಿಗಾಗಿ ಅರ್ಜಿ ಕೊಟ್ಟಿರುತ್ತಾರೆ. ನಾನು ಹದ್ದುಬಸ್ತು ಅಳತೆ ಮಾಡುವ ಎಷ್ಟು ದಿನ ಮೊದಲು ಪೊಡಿಯಾಗಿತ್ತು ಎನ್ನುವುದನ್ನು ದಾಖಲೆ ನೋಡಿ ಹೇಳಬಹುದು. ಎಲ್ಲಾ ಹಿಸ್ಸೆಗಳನ್ನು ಅಳತೆ ಮಾಡಿರುವ ವರದಿ ನೀಡಿರುತ್ತೀರಾ ಎಂದರೆ ಅಳತೆಯನ್ನು ಮಾಡಿ ಚೈನೀಜ್ ಪ್ರಕಾರ ವರದಿ ನೀಡಿರುತ್ತೇವೆ. ಯಾವ ದಿಕ್ಕಿಗೆ ಎಷ್ಟು ಅಳತೆ ಇರುತ್ತದೆ ಅಂತಾ ವರದಿಯಲ್ಲಿ ತಿಳಿಸಿರುತ್ತೀರಾ ಎಂದರೆ ಸದರಿ ಅಳತೆಗಳನ್ನು ಕಛೇರಿಯಲ್ಲಿ ಲಭ್ಯ ಇದ್ದ ದಾಖಲೆಗಳ ಆಧಾರದ ಮೇಲೆ ಮಾಡಿರುತ್ತೇವೆ. ವರದಿಯಲ್ಲಿ ಅಳತೆಗಳನ್ನು ಕೊಟ್ಟಿಲ್ಲ ಏಕೆಂದರೆ ಟಿಪ್ಪಣಿ ಪ್ರಕಾರ ಅಳತೆ ಮಾಡಿರುತ್ತೇವೆ. ಪೊಡಿ ಪ್ರಕಾರ ವರದಿಯಲ್ಲಿ ಅಳತೆಗಳನ್ನು ತಿಳಿಸಿದ್ದಿರಾ ಎಂದರೆ ಕಛೇರಿಯಲ್ಲಿದ್ದ ಅಳತೆಗಳ ಪ್ರಕಾರ ಪೊಡಿ ಮಾಡಲಾಗಿರುತ್ತದೆ ಅವುಗಳನ್ನು ವರದಿಯಲ್ಲಿ ತಿಳಿಸಿರುವುದಿಲ್ಲ. 86/1 ಮತ್ತು 86/2 ಸರ್ವೆ ನಂಬರ್‌ದವರು ಮಾತ್ರ 2 ಅರ್ಜಿಗಳನ್ನು ಕೊಟ್ಟಿರುತ್ತಾರೆ. ಅರ್ಜಿದಾರರ ಖರೀದಿ ಪತ್ರಗಳನ್ನು ನಾನು ನೋಡಿಲ್ಲ, ಸರ್ವೆ ದಾಖಲೆಗಳನ್ನು ಮಾತ್ರ ನೋಡಿರುತ್ತೇನೆ. 2 ಹಿಸ್ಸೆಗಳ ಮಧ್ಯೆ ದಾರಿ ಇರುವುದನ್ನು ನೋಡಿದ್ದೀರಾ ಎಂದರೆ ಸರ್ವೆ ದಾಖಲೆಗಳಲ್ಲಿ ದಾರಿ ಇರುವುದಿಲ್ಲ, ನಾನು ನೋಡಿಲ್ಲ. ದಾರಿ ಕುರಿತು ಪೊಡಿಯಾಗಿರುವುದು ನನಗೆ ಗೊತ್ತಿಲ್ಲ.

ಸರ್ವೆ ನಂ. 86/1 ಮತ್ತು 2 ರ ವಿಸ್ತೀರ್ಣ ಹೇಳುತ್ತೀರಾ ಎಂದರೆ ದಾಖಲೆ ನೋಡಿ ಹೇಳುತ್ತೇನೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ದಾಖಲೆಗಳನ್ನು ನೋಡಿ ಹೇಳಲು ತಕರಾರು ಮಾಡಿರುತ್ತಾರೆ. ಸಾಕ್ಷಿಯು ಸಾರ್ವಜನಿಕ ಅಧಿಕಾರಿಯಾಗಿದ್ದರಿಂದ ಮತ್ತು ಆತನ ಸೇವೆಯಲ್ಲಿ ಅಳತೆ ಮಾಡಿದ ಎಲ್ಲಾ ಜಮೀನುಗಳ ಅಳತೆಗಳನ್ನು ಮತ್ತು ವಿಸ್ತೀರ್ಣಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಅಸಾಧ್ಯವಾಗಿರುತ್ತದೆ. ಆದ್ದರಿಂದ ಪ್ರತಿವಾದಿ ಪರ ವಕೀಲರ ತಕರಾರರನ್ನು ತಿರಸ್ಕರಿಸಲಾಯಿತು. ಸಾಕ್ಷಿಗೆ ದಾಖಲೆ ನೋಡಿ ನೆನಪು ಮಾಡಿಕೊಳ್ಳಲು ಅನುಮತಿ ನೀಡಲಾಯಿತು.

ಹಿಸ್ಸಾ ನಂ. 1, 1 ಎಕರೆ 23 ಗುಂಟೆ ಇರುತ್ತದೆ. ಹಿಸ್ಸೆ ನಂ. 2, 1 ಎಕರೆ 3 ಗುಂಟೆ ಇರುತ್ತದೆ. ನಾನು ಜಮೀನಿಗೆ ಹೋಗಿ ಅಳತೆ ಮಾಡದೇ ವಾದಿಯರಿಗೆ ಅನುಕೂಲ ಮಾಡಲು ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ. 85 ಸರ್ವೆ ನಂ. 86 ರ ಪಶ್ಚಿಮಕ್ಕೆ ಬರುತ್ತದೆ. 85 ಸರ್ವೆ ನಂಬರ್‌ದಲ್ಲಿ ಎಷ್ಟು ಜನ ರೈತರು ಇರುತ್ತಾರೆ ಗೊತ್ತಿಲ್ಲ. ಸರ್ವೆ ನಂ. 85 ರ ಮಾಲೀಕರಿಗೆ ನೋಟೀಸ್‌ಗಳನ್ನು ನೀಡಿರುತ್ತೇವೆ. ನೋಟೀಸ್ ನೀಡಿರುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾರು ಯಾರಿಗೆ ನೋಟೀಸ್ ಕೊಡಲಾಗಿದೆ ಅಂತಾ ಕಡತ ನೋಡಿ ಹೇಳಬಹುದು ಹಾಗೆಯೇ ಹೇಳಲು ಬರುವುದಿಲ್ಲ. ನೋಟೀಸ್ ಕೊಟ್ಟಿಲ್ಲ ಆದ್ದರಿಂದ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ದಾರಿ ಬಿಟ್ಟು ಅಳತೆ ಮಾಡಿದ್ದರಿಂದ ಜಮೀನನ್ನು ಹೆಚ್ಚಿಗೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಮಾತು ಕೇಳಿ 85 ರಲ್ಲಿ ಜಮೀನು ಬರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಖರೀದಿ ಪತ್ರಕ್ಕೆ ವಿರುದ್ಧವಾಗಿ ಅಳತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಡಿ ದಾಖಲೆಗಳ ಪ್ರಕಾರ ಸರ್ವೆ ಮಾಡಿದ್ದೇನೆ. ವಾದಿಯರು ದಾರಿ ಹಿಡಿದು 2 ಎಕರೆ 26 ಗುಂಟೆ ಜಮೀನಿನ ಮಾಲೀಕರು ಇರುತ್ತಾರೆ ಎಂದರೆ ಅದು ಪೊಡಿ ಮೊದಲೇ ಆಗಿತ್ತು. ಆದ್ದರಿಂದ ದಾಖಲೆಗಳ ಪ್ರಕಾರ ಅಳತೆ ಮಾಡಿರುತ್ತೇನೆ. ದಾರಿಯ ವಿಸ್ತೀರ್ಣವನ್ನು ಸರ್ವೆ ನಂ. 85 ರಲ್ಲಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 85 ರ ಅಳತೆ ಮಾಡಿಲ್ಲ ಎಂದರೆ ಸರ್ವೆ ನಂ. 86 ರ ಬದುವಿನಿಂದ ಅಳತೆ ಮಾಡಿರುತ್ತೇನೆ. ಸರ್ವೆ ನಂ. 85 ಅಳತೆ ಮಾಡದೇ ಒತ್ತುವರಿ ಮಾಡಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ ಎಂದರೆ ಸರ್ವೆ ಟಿಪ್ಪಣಿ ಪ್ರಕಾರ 86 ರ ಗಡಿ ಗುರುತಿಸಿಕೊಂಡು ಅಳತೆ ಮಾಡಿದಾಗ ಒತ್ತುವರಿ ಕಂಡುಬಂದಿರುತ್ತದೆ. ಸರ್ವೆ ನಂ. 85 ಅಳತೆ ಮಾಡಿಲ್ಲ ಎಂದರೆ ಸರಿ. 85 ರಲ್ಲಿ ಹಿಸ್ಸೆಗಳಾಗಿರುವುದು ಗೊತ್ತಿಲ್ಲ. ಸರ್ವೆ ನಂ. 85 ರಲ್ಲಿ ಪಹಣಿ ಇದ್ದಂತಹ ವಿಸ್ತೀರ್ಣ ಸ್ಥಳದಲ್ಲಿ ಇರುತ್ತದೆ ಎಂಬುವದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಪ್ರತಿವಾದಿಯರ ಸಹಿ ಪಡೆದಿದ್ದೀರಾ ಎಂದರೆ ಅಳತೆ ಸಮಯದಲ್ಲಿ ಹಾಜರಿದ್ದವರ ಸಹಿ ಪಡೆದಿದ್ದೇನೆ. ಪ್ರತಿವಾದಿಯರು ಪಂಚನಾಮೆಗೆ ಸಹಿ ಮಾಡಲು ನಿರಾಕರಿಸಿರುತ್ತಾರೆ. ನಾನು ಸ್ಥಳದಲ್ಲಿ ಪಂಚನಾಮೆ ಮಾಡದ ಕಾರಣ ಪ್ರತಿವಾದಿಯರು ಸಹಿ ಮಾಡಲು ನಿರಾಕರಿಸಿರುತ್ತಾರೆ ಅಂತಾ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ವಾದಿಗಳ ಬಂಧುಗಳ ಸಹಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಳತೆ ಕಾಲದಲ್ಲಿ ಅವರು ಹಾಜರಿದ್ದರು ಸಹಿ ಮಾಡಿರುತ್ತಾರೆ. ಅವರು ಅವರ ಬಂಧುಗಳು ಎಂಬುವುದು ನನಗೆ ಗೊತ್ತಿಲ್ಲ. ವಾದಿಯರು ತೋರಿಸಿದ ವ್ಯಕ್ತಿಗಳ ಸಹಿ ಪಂಚನಾಮೆಗೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅಳತೆ ಕಾಲಕ್ಕೆ ಹಾಜರಿದ್ದವರ ಸಹಿ ಪಡೆದಿರುತ್ತೇನೆ. ಪಂಚನಾಮೆಗೆ ಸಹಿ ಮಾಡಿದವರು ಅರ್ಜಿದಾರರ ಸಂಬಂಧಿಕರು ಅಂತಾ ಗೊತ್ತಿದ್ದೇ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಜಮೀನು ಉಳುಮೆ ಮಾಡುವವರು ನಂದಿಕೇಶವ ಇವರ ಸಹಿ ಪಡೆದಿರುತ್ತೇನೆ ಎಂದರೆ ಅವರು ಅವರ ಜಮೀನು ಉಳುಮೆ ಮಾಡುವವರು ಅಂತಾ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಕಛೇರಿಯಲ್ಲಿ ಕುಳಿತು ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಕೆ. ನಂದೀಶ್ವರರಾವ್‌ರವರ ತಂದೆ ಶ್ರೀನಿವಾಸ ಅಂತಾ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಒತ್ತುವರಿಯಾಗಿದೆ ಅಂತಾ ನಾನು ಸಲ್ಲಿಸಿರುವ ವರದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮೊದಲಿನಿಂದ ಯಾವ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದರೋ ಅದೇ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು, ಸಿಂಧನೂರು.